**ಎಸ್. ಸೂರ್ಯಪ್ರಕಾಶ ಪಂಡಿತ್**



# ಜೀವನವೇ ಸಂದೇಶ

ಝೆನ್‌ಗುರು ಸೆಂಗೈ ಆಶ್ರಮದಲ್ಲಿ ಹಲವರು ಶಿಷ್ಯರಿದ್ದರು. ಅವರಲ್ಲಿ ಒಬ್ಬ ಶಿಷ್ಯ ಮಧ್ಯರಾತ್ರಿಯಲ್ಲಿ ಎದ್ದು, ಯಾರಿಗೂ ತಿಳಿಯದಂತೆ ಆಶ್ರಮದ ಗೋಡೆಯನ್ನು ಹಾರಿ, ಊರೆಲ್ಲವನ್ನೂ ತಿರುಗಾಡಿಕೊಂಡು, ಅನಂತರ ಬೆಳಗಿನ ಜಾವದಲ್ಲಿ ಹಿಂದಿರುಗುತ್ತಿದ್ದ. ಈ ಕೃತ್ಯವನ್ನು ಅವನು ದಿನವೂ ಮಾಡುತ್ತಿದ್ದ.

ಶಿಷ್ಯರು ಮಲಗುವ ಕೋಣೆಗಳನ್ನು ಪರೀಕ್ಷಿಸಲು ಒಂದು ರಾತ್ರಿ ಸೆಂಗೈ ಹೊರಟರು. ಎಂದಿನಂತೆ ಆ ಶಿಷ್ಯ ಕೋಣೆಯಲ್ಲಿ ಇರಲಿಲ್ಲ. ಆಶ್ರಮದ ಪ್ರಾಕಾರದ ಹತ್ತಿರ ಎತ್ತರದ